

# ಹಳೆ ಸೀರೆ ಹೊಸ ಉಡುಪು

ಅಲ್ಮೆರಾ ತುಂಬ ಸೀರೆ ಇಟ್ಟುಕೊಂಡು ಹಳೆಯದಾದಂತೆ ಅದನ್ನು ಏನು ಮಾಡುವುದು ಎಂಬ ಚಿಂತೆ ಅನೇಕ ಮಹಿಳೆಯರದ್ದು. ಇದನ್ನು ಸಲ್ವಾರ್, ಕುರ್ತಿ, ಲಂಗದಾವಣಿ ಮುಂತಾದ ಉಡುಪುಗಳಾಗಿ ಮಾರ್ಪಡಿಸಿ ತೊಟ್ಟುಕೊಂಡರೆ ಸಖತ್ ಲುಕ್ ಇರುತ್ತದೆ.

**■ ಆಶಾ ಎಸ್. ಕುಲಕರ್ಣಿ**

ಸೀರೆ ಎಂದರೆ ಸಾಕು ಅದರ ವೈವಿಧ್ಯಕ್ಕಂತೂ ಕೊನೆಯೇ ಇಲ್ಲ. ದಿನನಿತ್ಯ ಎಷ್ಟೇ ಹೊಸ ಹೊಸ ಆಧುನಿಕ ಡ್ರೆಸ್‌ಗಳು ಅಪ್‌ಡೇಟ್ ಆಗುತ್ತಿದ್ದರೂ ನಮ್ಮ ಸಾಂಪ್ರದಾಯಿಕ ಸೀರೆ ತನ್ನ ಬೇಡಿಕೆಯನ್ನು ಕಳೆದುಕೊಳ್ಳದೇ ಇನ್ನಷ್ಟು ನವ ನವೀನ ವಿನ್ಯಾಸ, ಹೊಸ ರೂಪ ಪಡೆದು ತನ್ನ ಸ್ಥಾನ ಭದ್ರಪಡಿಸಿಕೊಂಡಿದೆ. ವಸ್ತ್ರವಿನ್ಯಾಸಕಾರರು ಫ್ಯಾಷನ್ ಪ್ರಿಯರಿಗೋಸ್ಕರ ಸಾಕಷ್ಟು ಹೊಸ ಹೊಸ ಪ್ರಯೋಗ ಮಾಡಲು ಈ ತರಹೇವಾರಿ ಸೀರೆಗಳನ್ನು ಆಯ್ದುಕೊಳ್ಳುತ್ತಿದ್ದಾರೆ. ಸೀರೆ ಒಂದು ಕಚ್ಚಾ ವಸ್ತು ಇದ್ದ ಹಾಗೇ. ಅದರ ಮೇಲಿರುವ ಪ್ರಿಂಟ್ಸ್, ಬಾರ್ಡರ್, ಸೆರಗು ಹೀಗೆ ವಿವಿಧ ಭಾಗಗಳನ್ನು ಆಧಾರವಾಗಿಟ್ಟುಕೊಂಡು ಸಲ್ವಾರ್, ಕುರ್ತಿ, ಲಂಗ ದಾವಣಿ ತಯಾರಿಸಿ ತೊಡಬಹುದು.

ಸೀರೆಗಳಲ್ಲಿ ಉಡುಪುಗಳನ್ನು ಹೊಲಿಯುವುದು ಹೊಸ ಆವಿಷ್ಕಾರವೇನೂ ಅಲ್ಲ. ಇತ್ತೀಚೆಗೆ ಹಿಂದಿ ಚಿತ್ರರಂಗದ ನಾಯಕ ನಟ ತಮ್ಮ ತಾಯಿ ಉಡುತ್ತಿದ್ದ ರೇಷ್ಮೆ ಸೀರೆಯಲ್ಲಿ ತನಗೆ ಹಾಗೂ ತನ್ನ ಇಬ್ಬರು ಮಕ್ಕಳಿಗೆ ಕುರ್ತಿ ಹೊಲಿಸಿಕೊಂಡು, ಧರಿಸಿ ಫೇಸ್‌ಬುಕ್‌ಗೆ ಅಪ್‌ಲೋಡ್ ಮಾಡಿದಾಗ ಈ ಸುದ್ದಿ ಸಾಕಷ್ಟು ವೈರಲ್ ಆಯಿತು. ಹೀಗೆ ಅಮ್ಮಂದಿರು, ಅಜ್ಜಿಯರು ಉಡುತ್ತಿದ್ದ ಹಳೆ ರೇಷ್ಮೆ ಸೀರೆಗಳನ್ನು ಈ ರೀತಿಯಾಗಿಯೂ ಉಪಯೋಗಿಸಬಹುದಾ? ಎಂದು ಸಾಕಷ್ಟು ಜನರ ಹುಬ್ಬೇರುವಂತೆ ಮಾಡಿತು.

ರೇಷ್ಮೆಯಂಥ ದುಬಾರಿ ವಸ್ತ್ರದ ಸೀರೆಗಳಲ್ಲಿ ಲಂಗ ಜಾಕೆಟ್ ಹೊಲಿಸುವ ಪರಂಪರೆ ಬಹು ಹಿಂದಿನಿಂದಲೇ ನಡೆದುಕೊಂಡು ಬಂದಿದೆ. ಪ್ರತಿವರ್ಷ ಬರುವ ದೊಡ್ಡ ದೊಡ್ಡ ಹಬ್ಬಗಳಾದ ಸಂಕ್ರಾಂತಿ, ಯುಗಾದಿ, ವಿಜಯದಶಮಿ, ದೀಪಾವಳಿ ಹಬ್ಬಗಳಿಗೆ ಹೊಸ ಬಟ್ಟೆ

